ಪದರವನ್ನು ಕೊದಿಸಲಾಗಿದೆ. ಉಳಿದಂತೆ 1.50 ಕಿ.ಮೀ ರಸ್ತೆಯನ್ನು ಇನ್ನೂ ಕೈಗೊಳ್ಳಬೇಕಿದೆ.

ಉದ್ದೂರು ಕ್ರಾಸ್‌ನಿಂದ ದಮ್ಮನಕಟ್ಟೆವರೆಗಿನ ಮೇಲ್ಕಂಡ 9.50 ಕಿ.ಮೀ ರಸ್ತೆಯಲ್ಲಿನ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಇವರ ನೇತೃತ್ವದಲ್ಲಿ ರಚಿಸಲಾಗಿರುವ ಉಸ್ತುವಾರಿ ಸಮಿತಿಯು ಅನುಮತಿ ನೀಡದಿರುವ ಕಾರಣ ಸದರಿ ರಸ್ತೆಯು ಮಾರ್ಚ್ 2009 ರಿಂದ ಅಪೂರ್ಣ ಗೊಂಡಿರುತ್ತದೆ. ಉಸ್ತುವಾರಿ ಸಮಿತಿಯು ಮೇಲಿನ 9.50 ಕಿ.ಮೀ ರಸ್ತೆಗೆ ಬದಲಾಗಿ ಪರ್ಯಾಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಮಾಪನೆಯಲ್ಲಿರುವ ಸಹಕಾರ ಸಂಘಗಳು

497 (646) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಂಘಗಳು ಸಮಾಪನೆಯಲ್ಲಿವೆ? (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕೆಲವು ಸಮಾಪನೆ ಸಹಕಾರ ಸಂಘಗಳ ನೋಂದಣಿ ರದ್ದುಪಡಿಸಲು ಅನಾವಶ್ಯಕ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ) ಬಂದಿದ್ದಲ್ಲಿ, ಸಹಕಾರ ಇಲಾಖೆಯ ಅಪರ ನಿಬಂಧಕರಂತಹ ಉನ್ನತ ಹುದ್ದೆಯ ಅಧಿಕಾರಿಗಳನ್ನು ಸಮಾಪನಾಧಿಕಾರಿಗಳನ್ನಾಗಿ ನೇಮಿಸ ಲಾಗಿರುವುದೇ?

ಈ) ಇಂತಹ ನೇಮಕಾತಿಗಳು ಸಮರ್ಥನೀಯವೇ?

ಶ್ರೀ ಲಕ್ಷ್ಮಣ ಸವದಿ. (ಸಹಕಾರ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಿವರ ಈ ಕೆಳಂಡಂತಿರುತ್ತವೆ.

ಕ್ರ. ಸಂ.	ವರ್ಷ	ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ
01.	2006–07	2536
02.	2007–08	2382
03.	2008–09 (ಡಿಸೆಂಬರ್ 2009ರ ಅಂತ್ಯಕ್ಕೆ)	2356

ವರ್ಷವಾರು, ಜಿಲ್ಲಾವಾರು ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಬಂದಿದೆ, ಮುಖ್ಯವಾಗಿ ಕೆಲವು ಸಹಕಾರ ಸಂಘಗಳ ಆಸ್ತಿ ವಿಲೇವಾರಿಯ ಬಗ್ಗೆ ಅನಿರೀಕ್ಷಿತವಾಗಿ ಕೆಲವರು ವಿವಿಧ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದು, ಹಲವು ಪ್ರಕರಣಗಳು ಇನ್ನೂ ಇತ್ಯರ್ಥವಾಗದೇ ಇರುವುದರಿಂದ ಹಾಗೂ ಹಲವಾರು ಸಹಕಾರ ಸಂಘಗಳ ಆಸ್ತಿ ವಿಲೇವಾರಿಯ ಬಗ್ಗೆ ದಾಖಿಲಾತಿಗಳ ಕೊರತೆ ಇರುವುದರಿಂದ ನೊಂದಣಿ ರದ್ದತಿ ವಿಳಂಬವಾಗುತ್ತದೆ.

ಇ) ಹೌದು, ಎರಡು ಸಂಸ್ಥೆಗಳಲ್ಲಿ ಮಾತ್ರ ನೇಮಿಸಲಾಗಿರುತ್ತದೆ.

ಈ) ಸದರಿ ಸಂಸ್ಥೆಗಳ ಆಸ್ತಿ–ಜವಾಬ್ದಾರಿಗಳ ಸಮರ್ಪಕ ವಸೂಲಾತಿ ಹಾಗೂ ವಿಲೇವಾರಿಗೆ ಮತ್ತು ವ್ಯಾಜ್ಯಗಳ ಶೀಘ್ರ ಪರಿಹಾರಕ್ಕೆ ಜವಾಬ್ದಾರಿಯುತವಾದ ಕಾರ್ಯವನ್ನು ನಿರ್ವಹಿಸುವ ದೃಷ್ಟಿಯಿಂದ ಇಂತಹ ನೇಮಕಾತಿಗಳನ್ನು ಮಾಡಲಾಗಿದೆ.

ಅನುಬಂಧ – 1

2006–07, 2007–08 ಮತ್ತು 2008–09ರ ಅಂತ್ಯಕ್ಕೆ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ

ಕ್ರ. ಸಂ.	ಜಿಲ್ಲೆಯ ಹೆಸರು	2006–07	2007–08	2008–09
	ಬೆಂಗಳೂರು ಪ್ರಾಂತ			
1	ಬೆಂಗಳೂರು ನಗರ–1	68	57	56
2	ಬೆಂಗಳೂರು ನಗರ–2	74	63	54
3	ಬೆಂಗಳೂರು (ಗ್ರಾಮಾಂತರ)	103	33	30
4	ರಾಮನಗರ	–	71	70
5	ತುಮಕೂರು	68	58	52
6	ಕೋಲಾರ	171	94	92
7	ಚಿಕ್ಕಬಳ್ಳಾಪುರ	–	90	87
8	ಚಿತ್ರದುರ್ಗ	49	50	44
9	ದಾವಣಗೆರೆ	106	97	92
10	ಶಿವಮೊಗ್ಗ	82	74	72
	ಒಟ್ಟು	**721**	**687**	**648**
	ಗುಲ್ಬರ್ಗಾ ಪ್ರಾಂತ			
11	ಬಳ್ಳಾರಿ	93	87	96
12	ಬೀದರ್	78	76	90
13	ಗುಲ್ಬರ್ಗಾ	273	245	178
14	ಕೊಪ್ಪಳ	48	46	63
15	ರಾಯಚೂರು	93	45	41
	ಒಟ್ಟು	**585**	**499**	**468**

	ಮೈಸೂರು ಪ್ರಾಂತ			
16	ಮೈಸೂರು	152	132	108
17	ಚಾಮರಾಜನಗರ	24	23	16
18	ಮಂಡ್ಯ	67	62	56
19	ಹಾಸನ	94	90	102
20	ಚಿಕ್ಕಮಗಳೂರು	20	36	46
21	ಕೊಡಗು	23	22	17
22	ಮಂಗಳೂರು	25	19	19
23	ಉಡುಪಿ	19	31	35
	ಒಟ್ಟು	**424**	**415**	**399**
	ಬೆಳಗಾವಿ ಪ್ರಾಂತ			
24	ಬೆಳಗಾಂ	99	111	190
25	ಬಿಜಾಪುರ	126	118	137
26	ಬಾಗಲಕೋಟೆ	127	126	98
27	ಧಾರವಾಡ	186	179	163
28	ಗದಗ	77	71	79
29	ಹಾವೇರಿ	95	89	83
30	ಕಾರವಾರ	96	87	91
	ಒಟ್ಟು	**806**	**781**	**841**
	ಒಟ್ಟು	**2536**	**2382**	**2356**

ಸಕ್ಕರೆ ದಾಸ್ತಾನು

499 (1006) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಎಷ್ಟು ಸಕ್ಕರೆ ಅವಶ್ಯವಿದೆ?

ಆ) ರಾಜ್ಯದಲ್ಲಿ ಇಂದು ಸಕ್ಕರೆ ದಾಸ್ತಾನು ಎಷ್ಟಿದೆ?

ಇ) ಸಕ್ಕರೆ ಆಮದು ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?